UNIVERSITY LIBRARY
Newspaper's Agri Clippings
For more information visit University Library Website
Web - uasbagrilibindia.org
E-mail- librarian@uasbangalore.edu.in
Tuesday
17-03-2026

ಏ.4ರಿಂದ ಪ್ರತಿ ಶನಿವಾರ ರೈತ ರಿಯಾಲಿಟಿ ಶೋ

ಹೊಸ ವಿನೂತನ ಕಾರ್ಯಕ್ರಮ ''ರೈತರತ್ನ'' ಎಂಬ ಶೀರ್ಷಿಕೆಯಡಿ ರಾಜ್ಯದ್ಯಾಂತ ಸಾಧಕ ಕೃಷಿಕರನ್ನು ಪರಿಚಯಿಸುವ ರೈತರ ರಿಯಾಲಿಟಿ ಶೋ 52 ಸಂಚಿಕೆಗಳನ್ನು ಒಳಗೊಂಡಿದೆ. ಮೊದಲ ಕಂತಿನಲ್ಲಿ 26 ಸಂಚಿಕೆಗಳು ಹಾಗೂ ಉಳಿದ ಸಂಚಿಕೆಗಳನ್ನು 2ನೇ ಕಂತಿನಲ್ಲಿ ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಈ ಕಾರ್ಯಕ್ರಮ ಏಪ್ರಿಲ್ 4 ರಿಂದ ಪ್ರತಿ ಶನಿವಾರ ಸಂಜೆ ಮೂಡಿಬರಲಿದೆ.

Udayavani pg 01

ರೈತರ ರಿಯಾಲಿಟಿ ಶೋ ರೈತ ರತ್ನಕ್ಕೆ ಸಚಿವ ಚಾಲನೆ

ಚಂದನ ವಾಹಿನಿಯಲ್ಲಿ ಕಾರ್ಯಕ್ರಮ | ಎಐ ತಂತ್ರಜ್ಞಾನ ಬಳಸಿಕೊಂಡು ರೈತರು ಪ್ರಗತಿ ಸಾಧಿಸಿ: ಚಲುವರಾಯಸ್ವಾಮಿ

■ ಉದಯವಾಣಿ ಸಮಾಚಾರ

ಬೆಂಗಳೂರು: ಜಾಗತಿಕವಾಗಿ ಶರವೇಗದಲ್ಲಿ ಬೆಳವಣಿಗೆಯಾಗುತ್ತಿರುವ ಕೃತಕ ಬುದ್ಧಿಮತ್ತೆ (ಎಐ) ನೆರವಿನಂತೆ ಅತ್ಯಾಧುನಿಕ ತಂತ್ರಜ್ಞಾನ ಬಳಸಿಕೊಂಡು ರೈತ ಸಮೂಹ ಎಲ್ಲಾ ಹಂತದಲ್ಲೂ ಪ್ರಗತಿ ಸಾಧಿಸಬೇಕು ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಸಲಹೆ ನೀಡಿದರು.

ಬೆಂಗಳೂರು ದೂರದರ್ಶನ ಚಂದನವಾಹಿನಿಯಲ್ಲಿ ರೈತರ ರಿಯಾಲಿಟಿ ಶೋ ''ರೈತ ರತ್ನ'' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಕೃಷಿ ಕ್ಷೇತ್ರದಲ್ಲಿ ಇಂದು ಅಗಾಧ ಪರಿವರ್ತನೆಗಳಾಗುತ್ತಿವೆ. ಆದರೆ, ರೈತರ ಬದುಕಿನಲ್ಲಿ ಪ್ರಗತಿಯಾಗುತ್ತಿಲ್ಲ. ಪ್ರತಿ 2 ವರ್ಷಗಳಿಗೊಮ್ಮೆ ಒಂದೊಂದು ರೀತಿಯ ನೈಸರ್ಗಿಕ ವಿಪತ್ತುಗಳನ್ನು ಎದುರಿಸುವ ಸನ್ನಿವೇಶ ಸೃಷ್ಟಿಯಾಗುತ್ತಿದೆ. ಬೆಳೆ ಕೈಗೆ ಬರುವಾಗ ಏನಾದರೊಂದು ಸಮಸ್ಯೆ ಸೃಷ್ಟಿಯಾಗಿ ರೈತರು ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ. ಇಂತಹ ಎಲ್ಲಾ ವಿಪತ್ತುಗಳಿಂದ ಹೊರ ಬಂದು ರೈತ ಸಮುದಾಯ ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನವನ್ನು ಅಡಕಗೊಳಿಸಿಕೊಳ್ಳಬೇಕು. ಇದಕ್ಕಾಗಿ ಸರ್ಕಾರ ಎಲ್ಲಾ ರೀತಿಯಲ್ಲಿ ಪ್ರೋತ್ಸಾಹ ನೀಡಲಿದೆ ಎಂದರು.

ಬೆಂಗಳೂರು ದೂರದರ್ಶನ ಕೇಂದ್ರ ಕೃಷಿಗೆ ಹೆಚ್ಚಿನ ಆದ್ಯತೆ ನೀಡುತ್ತಿದೆ. ರೈತರ ಬದುಕಿಗೆ ಪೂರಕವಾಗಿ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದು ಅವುಗಳನ್ನು ಮತ್ತಷ್ಟು ಹೆಚ್ಚುಗೊಳಿಸಬೇಕು. ಈ ಮೂಲಕ ರೈತರಲ್ಲಿ ಆತ್ಮ ವಿಶ್ವಾಸ ಮೂಡಿಸುವಂತೆ ಕಾರ್ಯಕ್ರಮಗಳು ಮೂಡಿಬರಲಿ ಎಂದು ಆಶಿಸಿದರು.



ಚಂದನವಾಹಿನಿ ರೈತರ ರಿಯಾಲಿಟಿ ಶೋ 'ರೈತ ರತ್ನ' ಕಾರ್ಯಕ್ರಮಕ್ಕೆ ಕೃಷಿ ಸಚಿವ ಎನ್. ಚಲುವರಾಯ ಸ್ವಾಮಿ ಚಾಲನೆ ನೀಡಿದರು. ಕೆಪೆಕ್ ವ್ಯವಸ್ಥಾಪಕ ನಿರ್ದೇಶಕ ಶಿವಪ್ರಕಾಶ್, ಕೃಷಿ ವಿವಿ ಕುಲಪತಿ ಡಾ.ಸುರೇಶ್, ಡಾ.ಎಂ.ಬರಗೂರು ರಾಮಚಂದ್ರಪ್ಪ ಮತ್ತಿತರರಿದ್ದರು.

ಹಿರಿಯ ಸಾಹಿತಿ ಡಾ.ಎಂ.ಬರಗೂರು ರಾಮಚಂದ್ರಪ್ಪ ಮಾತನಾಡಿ, ರಿಯಾಲಿಟಿ ಅಲ್ಲದ ಶೋಗಳನ್ನು ರಿಯಾಲಿಟಿ ಶೋಗಳೆಂದು ಬಿಂಬಿಸುವ ಈಗಿನ ಸಂದರ್ಭದಲ್ಲಿ ರೈತರ ನಿಜ ಬದುಕನ್ನು ನೈಜವಾಗಿ ಚಿತ್ರಿಸಿ, ರೈತರಿಗಾಗಿ ನಡೆಸುತ್ತಿರುವ ''ರೈತ ರತ್ನ'' ನಿಜವಾದ ರಿಯಾಲಿಟಿ ಶೋ ಆಗಿದೆ. ಕೃಷಿ ಇಂದು ಉದ್ಯಮ ಸ್ವರೂಪ ಪಡೆದುಕೊಂಡಿದೆ. ರೈತ ಬೆಳೆಯುವ ಆಹಾರ ಮಾರುಕಟ್ಟೆ ಕೇಂದ್ರಿತವಾಗಿದೆ. ಸಣ್ಣ ಅತಿ ಸಣ್ಣ ರೈತರಿಗೆ ಸೂಕ್ತ ಪ್ರಮಾಣದಲ್ಲಿ ಸಾಲ, ಸೌಲಭ್ಯ ದೊರೆಯುತ್ತಿಲ್ಲ. ಈ ಎಲ್ಲಾ ಸವಾಲುಗಳ ನಡುವೆ ರೈತರಿಗಾಗಿ ಉತ್ತಮ ಕಾರ್ಯಕ್ರಮ ರೂಪಿಸಿರುವುದು ಶ್ಲಾಘನೀಯ ಎಂದರು.

ದೂರದರ್ಶನ ಕೇಂದ್ರದ ಕಾರ್ಯಕ್ರಮ ವಿಭಾಗದ ಮುಖ್ಯಸ್ಥೆ ಎಚ್.ಎನ್. ಆರತಿ ಮಾತನಾಡಿ, ಸಾಮಾಜಿಕ ಜಾಲತಾಣಗಳ ಅತಿಯಾದ ಬಳಕೆಯಿಂದ ಸಮಾಜದ ಸ್ವಾಸ್ಥ ಹಾಳಾಗುತ್ತಿರುವುದನ್ನು ಮನಗಂಡು ರೈತರಿಗಾಗಿ ಉತ್ತಮ ಕಾರ್ಯಕ್ರಮ ರೂಪಿಸಿದ್ದೇವೆ. ಇಂದು ಆಗಾಧ ಪ್ರಮಾಣದಲ್ಲಿ ಆಹಾರ ಪದಾರ್ಥಗಳನ್ನು ವ್ಯರ್ಥ ಮಾಡುತ್ತಿದ್ದು, ಹಸಿವು ಆಗದವರ ಕಣ್ತೆರೆಸುವ ಕಾರ್ಯಕ್ರಮವಾಗಿ ''ರೈತರತ್ನ'' ಮೂಡಿ ಬರಲಿದೆ ಎಂದು ಆಶಿಸಿದರು.

ಡಾ. ವೇಮಗಲ್ ನಾರಾಯಣ ಸ್ವಾಮಿ ಸಾಂಸ್ಕೃತಿಕ ಮತ್ತು ಸೇವಾ ಪ್ರತಿಷ್ಠಾನದ ಅಧ್ಯಕ್ಷ ಡಾ. ವೇಮಗಲ್ ನಾರಾಯಣ ಸ್ವಾಮಿ ಮಾತನಾಡಿ, ಜಗತ್ತಿನ ಪ್ರಮುಖ ದೇಶಗಳು ಇಂದು ಸಂಘರ್ಷದಲ್ಲಿ ತೊಡಗಿದ್ದು, ಪೈಪೋಟಿಗೆ ಬಿದ್ದಿವೆ. ಕೃಷಿ, ನೀರಾವರಿಯಲ್ಲಿ ವೈಜ್ಞಾನಿಕ ವಿಧಾನಗಳನ್ನು ಅಳವಡಿಸಿಕೊಳ್ಳುತ್ತಿಲ್ಲ. ಕಡಿಮೆ ಪ್ರಮಾಣದ ಹೂಡಿಕೆಯಿಂದ ಕೃಷಿ ಕ್ಷೇತ್ರಕ್ಕೆ ಧಕ್ಕೆಯಾಗುತ್ತಿದೆ ಎಂದರು. ಕಾರ್ಯಕ್ರಮದಲ್ಲಿ ಬೆಂಗಳೂರು ಕೃಷಿ ವಿವಿ ಕುಲಪತಿ ಡಾ. ಎಸ್.ವಿ. ಸುರೇಶ್, ಕೆಪೆಕ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್. ಶಿವಪ್ರಕಾಶ್, ಬೆಂಗಳೂರು ದೂರದರ್ಶನ ಕೇಂದ್ರದ ಉಪ ಮಹಾನಿರ್ದೇಶಕ ಹನುಮಂತ್, ಕಾರ್ಯಕ್ರಮ ನಿರ್ಮಾಪಕ ಎಚ್.ಎನ್. ಗೋಪಿನಾಥ್ ಸೇರಿದಂತೆ ಮತ್ತಿತರರು ಹಾಜರಿದ್ದರು.

ಏ.4ರಿಂದ ಪ್ರತಿ ಶನಿವಾರ ರೈತ ರಿಯಾಲಿಟಿ ಶೋ

ಹೊಸ ವಿನೂತನ ಕಾರ್ಯಕ್ರಮ ''ರೈತರತ್ನ'' ಎಂಬ ಶೀರ್ಷಿಕೆಯಡಿ ರಾಜ್ಯದ್ಯಾಂತ ಸಾಧಕ ಕೃಷಿಕರನ್ನು ಪರಿಚಯಿಸುವ ರೈತರ ರಿಯಾಲಿಟಿ ಶೋ 52 ಸಂಚಿಕೆಗಳನ್ನು ಒಳಗೊಂಡಿದೆ. ಮೊದಲ ಕಂತಿನಲ್ಲಿ 26 ಸಂಚಿಕೆಗಳು ಹಾಗೂ ಉಳಿದ ಸಂಚಿಕೆಗಳನ್ನು 2ನೇ ಕಂತಿನಲ್ಲಿ ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಈ ಕಾರ್ಯಕ್ರಮ ಏಪ್ರಿಲ್ 4 ರಿಂದ ಪ್ರತಿ ಶನಿವಾರ ಸಂಜೆ ಮೂಡಿಬರಲಿದೆ.

ಸಿಲಿಂಡರ್ ಕೊರತೆ ನಡುವೆಯೇ ದ.ಕನ್ನಡ ಜಿಲ್ಲೆಯ ಹಲವು ರೈತರ ದಿಟ್ಟ ಹೆಜ್ಜೆ | ಸಗಣಿಯಿಂದ ತಯಾರಾದ ಗ್ಯಾಸ್ ಬಳಸಿ ಅಡುಗೆ, ನಿತ್ಯದ ಜೀವನ ನಿರಾತಂಕ

Viswavani pg 10

ಎಲ್‌ಪಿಜಿಗೆ ಪರ್ಯಾಯವಾಗಿ ಗೋಬರ್ ಗ್ಯಾಸ್

ಮಂಗಳೂರು: ಅಡುಗೆ ಅನಿಲದ ಕೊರತೆಯಿಂದ ರಾಜ್ಯದ ಜನತೆ ಕಂಗಾಲಾಗಿದ್ದಾರೆ. ಈ ನಡುವೆ ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ರೈತರು ಜೈವಿಕ ಇಂಧನದ ಮೂಲಕ ಪರ್ಯಾಯ ದಾರಿಯನ್ನು ಕಂಡುಕೊಂಡಿದ್ದು, ಈ ಮೂಲಕ ಇತರರಿಗೆ ಪ್ರೇರಣೆ ನೀಡುತ್ತಿದ್ದಾರೆ. ಇಲ್ಲಿನ ರೈತರು ಹಸುವಿನ ಸಗಣಿಯಿಂದ ಉತ್ಪಾದಿಸುವ ಜೈವಿಕ ಇಂಧನದ ಮೂಲಕ ಅಡುಗೆ ಅನಿಲದ ಅವಲಂಬನೆಯನ್ನು ಕಡಿಮೆ ಮಾಡಿಕೊಂಡು, ಸ್ವಾವಲಂಬನೆಯತ್ತ ಹೆಜ್ಜೆ ಹಾಕುತ್ತಿದ್ದಾರೆ.

ಹಾಲು ಉತ್ಪಾದನೆ ಹಾಗೂ ಕೃಷಿಯನ್ನು ಅವಲಂಬಿಸಿಕೊಂಡಿರುವ ಇಲ್ಲಿನ ರೈತರಿಗೆ ಗೋವಿನ ಸಗಣಿ ಸುಲಭವಾಗಿ ಸಿಗುತ್ತದೆ. ಅದನ್ನೇ ಇಂಧನವಾಗಿ ಪರಿವರ್ತಿಸುವ ಜೈವಿಕ ಇಂಧನ ಘಟಕಗಳು ಇದೀಗ ಹಲವು ರೈತರ ಮನೆಗಳಲ್ಲಿ ಬಳಕೆಯಲ್ಲಿವೆ. ಇದರಿಂದ ಅಡುಗೆ ಅನಿಲದ ಕೊರತೆ ಎದುರಾದರೂ ಅವರ ದಿನನಿತ್ಯದ ಬದುಕು ಅಷ್ಟಾಗಿ ತೊಂದರೆಗೊಳಗಾಗುವುದಿಲ್ಲ.

ಉಳ್ಳಾಲ ತಾಲೂಕಿನ ಇನೋಳಿಯಲ್ಲಿ ಹೋಂಸ್ಟೇ ಮತ್ತು ಫಾರ್ಮ್‌ಹೌಸ್ ನಡೆಸುತ್ತಿರುವ ರೈತ ಗ್ಲೆನ್ ರೋಚೆ ಇತರರಿಗೆ ಉದಾಹರಣೆಯಾಗಿದ್ದಾರೆ. ಹೈನುಗಾರರಿಗೆ ಮತ್ತು ಕೃಷಿ ಚಟುವಟಿಕೆಗಳ ಜೊತೆಗೆ ಜೈವಿಕ ಇಂಧನ ಘಟಕವನ್ನು ಯಶಸ್ವಿಯಾಗಿ ಬಳಸುತ್ತಿದ್ದಾರೆ. ಅವರ ಬಳಿ ಇರುವ ಹಸುಗಳಿಂದ ದೊರೆಯುವ ಸಗಣಿಯನ್ನು ಬಳಸಿ ಪ್ರತಿದಿನ ಜೈವಿಕ ಇಂಧನ ಉತ್ಪಾದಿಸಿ ಅಡುಗೆ ಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೆ.



ನಮ್ಮ ಬಳಿ ಇರುವ ಹಸುಗಳಿಂದ ದೊರೆಯುವ ಸಗಣಿಯನ್ನು ಜೈವಿಕ ಇಂಧನ ಘಟಕಕ್ಕೆ ಬಳಸುತ್ತೇವೆ. ಇದರಿಂದ ಅಡುಗೆ ಅನಿಲ ಸಿಲಿಂಡರ್ ಅವಲಂಬನೆ ಕಡಿಮೆಯಾಗಿದೆ. ಕಾರ್ಮಿಕರು ಹಾಗೂ ಮನೆಯವರು ಎಲ್ಲರೂ ಅದನ್ನೇ ಅಡುಗೆಗಾಗಿ ಬಳಸುತ್ತಾರೆ. ವಿದ್ಯುತ್ ಅಗತ್ಯಗಳಿಗೆ ಸೌರಶಕ್ತಿಯನ್ನು ಬಳಸುತ್ತಿದ್ದೇವೆ ಮತ್ತು ಹೊಲಗಳಿಗೆ ಸಹಜ ಸಾವಯವ ಗೊಬ್ಬರವನ್ನು ಉಪಯೋಗಿಸುತ್ತೇವೆಂದು ಗ್ಲೆನ್ ರೋಚೆ ಅವರು ಹೇಳಿದ್ದಾರೆ.

ಇದೇ ರೀತಿಯಲ್ಲಿ ಪುತ್ತೂರು ತಾಲೂಕಿನ ಮುರುಳ್ಯ ಗ್ರಾಮದ ರೈತ ಜಗನ್ನಾಥ ಪೂಜಾರಿ ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಸ್ಥಾಪಿಸಿದ್ದ ಜೈವಿಕ ಇಂಧನ ಘಟಕವನ್ನು ಇನ್ನೂ ಬಳಸುತ್ತಿದ್ದಾರೆ. ಹಿಂದೆ ಹೆಚ್ಚಿನ ಸಂಖ್ಯೆಯಲ್ಲಿ ಹಸುಗಳನ್ನು ಸಾಕುತ್ತಿದ್ದ ಅವರು ಈಗ ಕಡಿಮೆ ಸಂಖ್ಯೆಯ ಹಸುಗಳನ್ನು ಹೊಂದಿದ್ದರೂ ಜೈವಿಕ ಇಂಧನದ ಬಳಕೆ ಮುಂದುವರಿಸಿದ್ದಾರೆ.

ಪ್ರತಿದಿನ ಸಗಣಿಯಿಂದ ಜೈವಿಕ ಇಂಧನ ಉತ್ಪಾದಿಸುತ್ತೇವೆ. ಇದರಿಂದ ಅಡುಗೆ ಅನಿಲ ಸಿಲಿಂಡರ್ ಅಗತ್ಯ ಬಹುತೇಕ ಕಡಿಮೆಯಾಗಿದೆ. ಇದು ಸ್ವಚ್ಛ, ಹೊಗೆರಹಿತ ಹಾಗೂ ಪರಿಸರ ಸ್ನೇಹಿ ಇಂಧನವಾಗಿದೆ ಎಂದು ಜಗನ್ನಾಥ ಅವರು ಹೇಳಿದ್ದಾರೆ.

ಪರಿಸರ ತಜ್ಞ ಜೀಕ್ ಮಿಲನ್ ರೋಚೆ ಅವರು ಮಾತನಾಡಿ, ಜೈವಿಕ ಇಂಧನವು ಕೇವಲ ಪರ್ಯಾಯ ಇಂಧನವಲ್ಲ, ಪರಿಸರ ಸಂರಕ್ಷಣೆಗೆ ಸಹ ಸಹಕಾರಿ. ಜೈವಿಕ ಇಂಧನದಿಂದ ತ್ಯಾಜ್ಯವನ್ನು ಇಂಧನವಾಗಿ ಪರಿವರ್ತಿಸಬಹುದು. ಇದರಿಂದ ಕಟ್ಟಿಗೆಗಳ ಬಳಕೆ ಕಡಿಮೆಯಾಗುತ್ತದೆ ಹಾಗೂ ಕಾಡಿನ ಸಂರಕ್ಷಣೆಗೂ ನೆರವಾಗುತ್ತದೆ. ಇದು ಸ್ಥಳೀಯವಾಗಿ ಲಭ್ಯವಿರುವ ನವೀಕರಿಸಬಹುದಾದ ಶಕ್ತಿಯ ಮೂಲವೂ ಆಗಿದೆ ಎಂದು ಹೇಳಿದ್ದಾರೆ. ಎಲ್‌ಪಿಜಿ ಕೊರತೆ ಉಂಟಾದ ಈ ಸಂದರ್ಭದಲ್ಲಿ ದಕ್ಷಿಣ ಕನ್ನಡದ ರೈತರು ಜೈವಿಕ ಇಂಧನದ ಬಳಕೆಯ ಮೂಲಕ ಪರ್ಯಾಯ ದಾರಿಯನ್ನು ಹುಡುಕಿಕೊಂಡಿದ್ದು, ಕೃಷಿ, ಪಶುಸಂಗೋಪನೆ ಮತ್ತು ನವೀಕರಿಸಬಹುದಾದ ಶಕ್ತಿಯನ್ನು ಒಟ್ಟಿಗೆ ಬಳಸುವ ಈ ವಿಧಾನವು ಗ್ರಾಮೀಣ ಜೀವನದಲ್ಲಿ ಸ್ವಾವಲಂಬನೆ ಬದುಕು ಸಾಧಿಸಲು ಸಹಾಯಕವಾಗುತ್ತಿದೆ.

ಶೀಘ್ರ ಸಾವಿರ ಹುದ್ದೆ ಭರ್ತಿ

ನಾಲ್ಕೈದು ತಿಂಗಳಲ್ಲಿ ಕೃಷಿ ಇಲಾಖೆಯಲ್ಲಿನ ನೇಮಕಾತಿ ಪೂರ್ಣ

ರಾಜ್ಯದ ರೈತರಿಗೆ ಎಐ ಬಲ, ಸುಸ್ಥಿರ ಕೃಷಿಗೆ ವಸುಧಾಮೃತ ರಕ್ಷಾಕವಚ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ನಾಡಿನ ಕೃಷಿ ಕ್ಷೇತ್ರವನ್ನು ಬಲಗೊಳಿಸುವ ಮತ್ತು ರೈತಾಪಿ ವರ್ಗಕ್ಕೆ ಅತ್ಯಾಧುನಿಕ ತಂತ್ರಜ್ಞಾನದ ನೆರವು ತಲುಪಿಸುವ ತಮ್ಮ ಕನಸನ್ನು ಕೃಷಿ ಸಚಿವ ಚೆಲುವರಾಯಸ್ವಾಮಿ ತೆರೆದಿಟ್ಟಿದ್ದಾರೆ. ಜತೆಗೆ ಇಲಾಖೆಗೆ ಅಗತ್ಯವಾದ ಖಾಲಿ ಹುದ್ದೆಗಳನ್ನು ಆದ್ಯತೆ ಮೇಲೆ ಭರ್ತಿ ಮಾಡಲು ಸರ್ಕಾರ ಉದ್ದೇಶಿಸಿದ್ದು, ಮೊದಲ ಹಂತದಲ್ಲಿ ಒಂದು ಸಾವಿರ ಹುದ್ದೆ ಭರ್ತಿಗೆ ನಿರ್ಧರಿಸಿರುವ ಸಂಗತಿಯನ್ನು ಅವರು **ವಿಜಯವಾಣಿ** ಸಂವಾದದಲ್ಲಿ ಹಂಚಿಕೊಂಡಿದ್ದಾರೆ.

■ **160 ಲಕ್ಷ ಮೆಟ್ರಿಕ್ ಟನ್ ಸಿರಿಧಾನ್ಯ ಉತ್ಪಾದನೆ**

■ **ವಿಜಯವಾಣಿ ಸಂವಾದದಲ್ಲಿ ಕೃಷಿ ಸಚಿವ ಚೆಲುವರಾಯಸ್ವಾಮಿ**

ಒಂದು ಸಾವಿರ ಕೃಷಿ ಅಧಿಕಾರಿ ಮತ್ತು ಸಹಾಯಕ ಕೃಷಿ ಅಧಿಕಾರಿ ಹುದ್ದೆಗಳ ಭರ್ತಿಗೆ ಅನುಮತಿ ತೆಗೆದುಕೊಳ್ಳಲಾಗಿದ್ದು, ಒಳಮೀಸಲು ವಿಚಾರದಲ್ಲಿ ಸ್ಪಷ್ಟತೆ ಮೂಡಿದ ಕೂಡಲೇ 4-5 ತಿಂಗಳಲ್ಲಿ ನೇಮಕ ಪ್ರಕ್ರಿಯೆ ಮುಗಿಸಲಾಗುತ್ತದೆ ಎಂದು ವಿವರಿಸಿದರು.

ಉತ್ಪಾದನೋತ್ತರ ಕೃಷಿ: ರಾಜ್ಯದಲ್ಲಿ ಸಿರಿಧಾನ್ಯ ಮೇಳಕ್ಕೆ ಪ್ರೋತ್ಸಾಹ ನೀಡಿದ ಪರಿಣಾಮ 160 ಲಕ್ಷ ಮೆಟ್ರಿಕ್ ಟನ್ ಉತ್ಪಾದನೆಯಾಗುತ್ತಿದೆ. ಮುಂದೆ ರೈತರಿಗೆ ಆದಾಯ ಬರುವಂತೆ ಮಾಡಲು ಉತ್ಪಾದನೋತ್ತರ ಕೃಷಿಗೆ ಒತ್ತು ನೀಡಲಾಗುತ್ತಿದೆ. ಇಡೀ ದೇಶದಲ್ಲೇ ನಮ್ಮ ರಾಜ್ಯ ಮುಂಚೂಣಿಯಲ್ಲಿದೆ. ಕೇಂದ್ರವೂ ಬೆಂಬಲಿಸುವ ಭರವಸೆ ನೀಡಿದೆ ಎಂದು ಹೇಳಿದರು. ಬೀಜೋತ್ಪಾದನಾ ಕೇಂದ್ರಗಳು, ರೈತ ಸಂಪರ್ಕ ಕೇಂದ್ರಗಳು, ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳು ಮತ್ತು ಜೈವಿಕ ನಿಯಂತ್ರಣ ಪ್ರಯೋಗಾಲಯಗಳನ್ನು ಒಂದೇ ಸೂರಿನಡಿ ತಂದು ಬಲಪಡಿಸುವ ಉದ್ದೇಶದಿಂದ ಕೃಷಿ ಅಭಿವೃದ್ಧಿ ಯೋಜನೆ ಸ್ಥಾಪಿಸಲಾಗಿದೆ. ಹಾಗೆಯೇ ಕೃಷಿ ಇಲಾಖೆಯಲ್ಲಿ ಪರಿಕರಗಳ ವಿತರಣೆಯಲ್ಲಿ ಪಾರದರ್ಶಕತೆ ತರಲು ಪರಿಕರಗಳಿಗೆ ಕ್ಯೂ ಆರ್ ಕೋಡ್ ಅಳವಡಿಸಲು ಕ್ರಮವಹಿಸಲಾಗಿದೆ ಎಂದು ಸಚಿವರು ವಿವರಿಸಿದರು.



ವಸುಧಾಮೃತ ಜಾರಿಗಾಗಿ ಸಿದ್ಧತೆ

ಮಣ್ಣಿನ ಸಾವಯವ ಇಂಗಾಲ ಹಾಗೂ ಅದರ ಭೌತಿಕ, ರಾಸಾಯನಿಕ ಮತ್ತು ಜೈವಿಕ ಗುಣಮಟ್ಟ ಹೆಚ್ಚಿಸುವ ಮೂಲಕ ಪರಿಸರ ಸ್ನೇಹಿ ಮತ್ತು ಸುಸ್ಥಿರ ಕೃಷಿ ಪದ್ಧತಿ ಉತ್ತೇಜಿಸಲು 'ವಸುಧಾಮೃತ' ಕಾರ್ಯಕ್ರಮವನ್ನು ಮುಂದಿನ ವರ್ಷಗಳಲ್ಲಿ ಜಾರಿಗೊಳಿಸಲಾಗುತ್ತದೆ. ಹಾಗೆಯೇ, ಉತ್ಪಾದನೋತ್ತರ ಕೃಷಿ ಚಟುವಟಿಕೆಗಳಾದ ಸಂಸ್ಕರಣೆ, ಮೌಲ್ಯವರ್ಧನೆ, ಮೌಲ್ಯ ಸರಪಳಿ ಅಭಿವೃದ್ಧಿ, ಕೃಷಿ ತ್ಯಾಜ್ಯಗಳ ಮರುಬಳಕೆ ಹಾಗೂ ಮಾರುಕಟ್ಟೆ ಸಂಪರ್ಕಗಳನ್ನು ಸಮಗ್ರವಾಗಿ ಬಲಪಡಿಸುವ ಮೂಲಕ ಗ್ರಾಮೀಣ ರೈತರಿಗೆ ಸ್ಥಿರ ಮತ್ತು ಹೆಚ್ಚುವರಿ ಆದಾಯದ ಮೂಲ ಸೃಷಿಸುವ ಉದ್ದೇಶದಿಂದ ಮುಖ್ಯಮಂತ್ರಿ ಕೃಷಿ ವಿಸ್ತಾರ ಯೋಜನೆಯನ್ನು ಮುಂದಿನ ಮೂರು ವರ್ಷಗಳಲ್ಲಿ 100 ಕೋಟಿ ರೂ. ವೆಚ್ಚದಲ್ಲಿ ಅನುಷ್ಠಾನಗೊಳಿಸಲಾಗುವುದು ಎಂದು ವಿವರಿಸಿದರು.



ಡಿಜಿ ಸೇವಾ ಕೇಂದ್ರ ಸ್ಥಾಪನೆ

ರಾಜ್ಯದ ರೈತರಿಗೆ ಜಾಗತಿಕ ಮಟ್ಟದಲ್ಲಿ ಕೃಷಿ ಕ್ಷೇತ್ರದಲ್ಲಿ ಆಗುತ್ತಿರುವ ನೂತನ ಆವಿಷ್ಕಾರಗಳ ಬಗ್ಗೆ ಮಾಹಿತಿ ನೀಡಲು ಡಿಜಿಟಲ್ ಕೃಷಿ ಸೇವೆಗಳ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ. ಹಾಗೆಯೆ ರೈತರಿಗೆ ಒಂದೇ ಸೂರಿನಡಿ ಹವಾಮಾನ, ಮಾರುಕಟ್ಟೆ, ಕೃಷಿ ತಾಂತ್ರಿಕತೆ ಮತ್ತು ಇಲಾಖಾ ಮಾಹಿತಿಯನ್ನು ತ್ವರಿತವಾಗಿ ಒದಗಿಸಲು ಕೃಷಿ ಇಲಾಖೆಯ 'ರೈತ ಕರೆ ಕೇಂದ್ರ'ವನ್ನು ಎಐ ತಂತ್ರಜ್ಞಾನದಿಂದ ಉನ್ನತೀಕರಿಸಲಾಗುವುದೆಂದು ಕೃಷಿ ಸಚಿವರು ವಿವರಿಸಿದರು. ಮೊಬೈಲ್ ಅಪ್ಲಿಕೇಷನ್ ಸಿದ್ಧಪಡಿಸುತ್ತಿದ್ದು, ಇದು ರೈತರಿಗೆ ಬಹಳ ಉಪಯೋಗಕಾರಿಯಾಗಿರಲಿದೆ. ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಸಂದೇಶ ಬರುವಂತೆ, ವಾಯ್ಸ್ ಉತ್ತರ ಬರುತ್ತದೆ. ಒಂದು ಕರೆ ಮಾಡಿದರೆ, ಯಾವ ಬೆಳೆ ಹಾಕಬೇಕು, ಮಳೆ ಪರಿಸ್ಥಿತಿ ಏನು, ಮಾರುಕಟ್ಟೆ ಎಲ್ಲ ಮಾಹಿತಿಯೂ ತಿಳಿಯಲಿದೆ. ಜತೆಗೆ ಸಹಾಯಧನ, ಸೌಲಭ್ಯಗಳ ಕುರಿತೂ ತಿಳಿದುಕೊಳ್ಳುವಂತೆ ವ್ಯವಸ್ಥೆ ರೂಪಿಸಲಾಗುತ್ತಿದೆ ಎಂದು ಸಚಿವರು ಹೇಳಿದರು.



ರೈತ ಮಾಲ್‌ನಲ್ಲಿ ಸಮಗ್ರ ಸೌಲಭ್ಯ

ಬಿತ್ತನೆ ಬೀಜ, ಗೊಬ್ಬರ, ಕೀಟನಾಶಕ ಒಂದೇ ಕಡೆ ಸಿಕ್ಕಬೇಕೆಂಬುದು ಬಹಳ ಜನರ ಬೇಡಿಕೆ. ಇದಕ್ಕಾಗಿ ರೈತ ಮಾಲ್‌ಗಳನ್ನು ಸ್ಥಾಪಿಸಲಾಗುತ್ತಿದೆ. ರೈತರಿಗೆ ಉತ್ತಮ ಗುಣಮಟ್ಟದ ಕೃಷಿ ಪರಿಕರಗಳನ್ನು ಕೈಗೆಟುಕುವ ದರದಲ್ಲಿ ಲಭ್ಯವಾಗಿಸುವುದರ ಜತೆಗೆ ಮಾರುಕಟ್ಟೆಯ ಅನಿಶ್ಚಿತತೆಯನ್ನು ನಿವಾರಿಸುವ ಉದ್ದೇಶದಿಂದ ಬಿತ್ತನೆ ಬೀಜಗಳು, ಕೀಟನಾಶಕಗಳು, ರಸಗೊಬ್ಬರಗಳು ಹಾಗೂ ಯಂತ್ರೋಪಕರಣಗಳನ್ನು ಒಂದೇ ಸೂರಡಿ ದೊರಕಿಸಲು ಪ್ರಾಯೋಗಿಕವಾಗಿ ಕೋಲಾರ ಜಿಲ್ಲೆಯ ಪ್ರತಿ ತಾಲೂಕಿನಲ್ಲಿ ಎಂಎಎಸ್‌ಐಎಲ್‌ನಿಂದ ರೈತ ಮಾಲ್ ಸ್ಥಾಪಿಸಲಾಗುತ್ತಿದೆ ಎಂದು ಕೃಷಿ ಸಚಿವರು ಮಾಹಿತಿ ಹಂಚಿಕೊಂಡರು.

ವಿಜಯವಾಣಿ ನಂ.1 ಕನ್ನಡ ದಿನಪತ್ರಿಕೆ
Bengaluru Edition
Mar 17, 2026 Page No. 3
Powered by: erelego.com